Sri A. P. APPANNA.—They have not fulfilled the conditions that have been laid down while issuing the licence.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಸೀರಿಯರ್ ನಂ. 14ರಲ್ಲಿ ಮೈಸೂರು ರಾಜ್ಯದ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಡೆವೆಲಪ್‌ಮೆಂಟ್ ಕಾರ್ಪೊರೇಶನ್‌ನ ಮಿಲ್ಲಿದೆ, ಈ ಪರಿಸ್ಥಿತಿ ಬರಬೇಕಾದರೆ, ತಾವು ಹೇಳಿದಂತಹ ಡೈರೆಕ್ಟರನ್ನು ತೆಗೆದುಕೊಳ್ಳಲಿಲ್ಲ ಎಂಬ ಭಾವನೆಯಿಂದ ಒಬ್ಬರಿಗೊಬ್ಬರು ಗಲಭೆ, ಹೊಟ್ಟೆಕಿಚ್ಚಿನಿಂದ ಈ ಮಿಲ್ಲಿಗೆ ಧಕ್ಕೆ ಬಂದಿರುವುದಲ್ಲವೇ ?

ಶ್ರೀ ಎ. ಪಿ. ಅಪ್ಪಣ್ಣ.—ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಈ ಇಂಡಸ್ಟ್ರಿ ಕೆಲಸಕ್ಕೆ ಲೈಸನ್ಸ್ ತರಿಸಿ ಅದನ್ನು ಸುವ್ಯವಸ್ಥಿತ ಕ್ರಮದಲ್ಲಿ ನಡೆಸಿಕೊಂಡು ಹೋಗಲು ಕ್ರಮ ಕೈಗೊಂಡಿರುವುದರಿಂದ ಅವರು ಇಂಥ ಸಂಸ್ಥೆಗಳಿಗೆ ಧಕ್ಕೆ ಬರುವಂತೆ ಮಾಡುತ್ತಾ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗ ತಾವು ಉತ್ತರದಲ್ಲಿ ಲ್ಯಾಂಡ್ ಅಕ್ವಾಯರ್ ಮಾಡಿಕೊಂಡಿದ್ದಾರೆ, ಲೈಸೆನ್ಸ್ ಸರೆಂಡರ್ ಮಾಡಿದ್ದಾರೆ, ಮೆಷಿನರಿ ಕೊಂಡುಕೊಂಡಿದ್ದಾರೆ ಇತ್ಯಾದಿಗಳನ್ನು ತಿಳಿಸಿದ್ದೀರಿ. ಈಗ ಲ್ಯಾಂಡ್ ಸರೆಂಡರ್ ಮಾಡಿದಮೇಲೆ ಇವತ್ತಿನ ದಿವಸ ಈ ಇಂಡಸ್ಟ್ರಿಯನ್ನು ಸರ್ಕಾರದ ವತಿಯಿಂದ ಹಾರನದಲ್ಲಿ ಸ್ಥಾಪಿಸುವುದಕ್ಕೆ ವ್ಯವಸ್ಥೆಮಾಡುತ್ತೀರಾ ?

Sri A. P. APPANNA.—If private parties or co-operative sector units come forward to start industries, the Corporation will take interests in the matter and give all assistance.

Harijan House Building Society, Magadi

*Q.—72. Sri C. R. RANGE GOWDA (Magadi).—

Will the Minister for Development and Co-operation be pleased to state:—

(*a*) the number of shares in the Harijan House Building Co-operative Society, Magadi Taluk (village wise figures may be furnished);

(*b*) the share capital : (i) Government share, (ii) Members share;

(*c*) whether the General body meeting has been conducte to elect the President as per the circular from the Registrar of Co-operative Societies, Mysore Bangalore;

(*d*) if not, the reason for the same ?

A.—Sri P. M. NADAGOUDA (Minister for Development and Co-operation).—

(*a*) 444 for villagewise figures *Vide* list placed on the Table of the House**

(*b*) Rs. 20,070 and Rs. 4,440 respectively.

(*c*) No.

(*d*) The bye-laws of the society are yet to be amended making provision to elect their own President.

**Copy placed in the Mysore Legislature Library vide No. 17, dated 13-8-67.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ಮಾಗಡಿ ತಾಲ್ಲೂಕಿನಲ್ಲಿರುವ ಹರಿಜನರ ಗೃಹ ನಿರ್ಮಾಣ ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿ ಮಾಡಬೇಕೆಂದು ಈ ಬಗ್ಗೆ ಎಕ್ಸಿಕ್ಯೂಟಿವ್ ಕಮಿಟಿಯಲ್ಲಿ ಒಂದು ತೀರ್ಮಾನ ಮಾಡಿ ರೆಸಲ್ಯೂಶನ್ ಪಾಸ್ ಮಾಡಿದರೂ ಕೂಡ ಅಧ್ಯಕ್ಷರು ಜನರಲ್ ಬಾಡಿ ಕರೆಯಲು ಅನೇಕ ವರ್ಷಗಳಿಂದ ಕಾಲವನ್ನು ತಳ್ಳುವುದರಿಂದ, ನೊಂದ ಹರಿಜನರಿಗೆ ಬಹಳ ರೀತಿಯಲ್ಲಿ ತೊಂದರೆಯಾಗಿದೆ. ಈ ರೀತಿಯ ಕ್ರಮಕ್ಕೆ ಕಾರಣವೇನು ಮತ್ತು ಅದನ್ನು ಸರಿಪಡಿಸುವಂತೆ ಬೇಗನೆ ಆದೇಶ ಕೊಡುತ್ತೀರಾ ?

†ಶ್ರೀ ಪಿ. ಎಂ. ನಾಡಗೌಡ.—ಅವರಿಗೆ ಸರ್ಕಾರದವರು ಈಗ ಬೈಲಾವನ್ನು ತಿದ್ದುಪಡಿ ಮಾಡಬೇಕೆಂದು ತಿಳಿಸಿದ್ದಾರೆ. ಈ ತಿಂಗಳಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, 4-5 ವರ್ಷಗಳಿಂದಲೂ ಕೂಡ ಮಾಗಡಿ ತಾಲ್ಲೂಕಿನಲ್ಲಿ 1 ಮತ್ತು 2 ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಮಾಡದೇ ಇರುವ ಸೊಸೈಟಿ ಆಗಿದೆ. ಇದು ನಾಚಿಕೆಗೇಡುತನ. ಈ ಸೊಸೈಟಿಯ ಆಡಳಿತವನ್ನು ಸರಿಪಡಿಸುವುದಕ್ಕೆ ನೂಕ್ತ ಕ್ರಮವನ್ನು ತೆಗೆದುಕೊಂಡು ಜಾಗ್ರತೆ ಹರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಯಾವ ತರಹ ಸಹಾಯ ಮಾಡಬೇಕೋ ಆ ರೀತಿ ಮಾಡಿದ್ದೇವೆ. ಸರ್ಕಾರದ ಹತ್ತಿರ 3 ಕೋಟಿ 75 ಲಕ್ಷ ರೂಪಾಯಿ ಇದೆ. ಹೌಸಿಂಗ್ ಸೊಸೈಟಿಯ ಸಲುವಾಗಿ 1 ಕೋಟಿ 60 ಲಕ್ಷಕ್ಕಿಂತ ಹೆಚ್ಚಿಗೆ ಖರ್ಚುಮಾಡಿದ್ದೇವೆ. ಇನ್ನೂ ರೊಕ್ಕ ಇದೆ ; ಸೊಸೈಟಿಗಳಲ್ಲಿ ಅಂತಃಕಲಹ ಇದ್ದರೆ ಅಂತಹಕಡೆ ಮಾರ್ಗದರ್ಶನ ಮಾಡುವುದಕ್ಕೆ ತಯಾರು ಇದ್ದೇವೆ ಎಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮಂಚನಬೆಲೆ ಸೊಸೈಟಿಯಲ್ಲಿ ಇಬ್ಬರು ನೇರ್ ಹೋಲ್ಡರ್ಸ್ ಇದ್ದಾರೆ. ಮಾನ್ಯ ರವಿನ್ಯೂ ಮಂತ್ರಿಗಳು ಹೋದವರ್ಷ ಅಲ್ಲಿ ಒಂದು ಹರಿಜನ ಸಮ್ಮೇಳನಕ್ಕೆ ಬಂದಾಗ ಅವರಿಗೆ 500 ರೂಪಾಯಿ ಕಟ್ಟಿದ ರಶೀದಿಯನ್ನು ತೋರಿಸಿತ್ತು. ಸಂಘದ ಅಧ್ಯಕ್ಷರು ಅದನ್ನು ಕಟ್ಟಿದ್ದಾರೆ ಎಂದು ಹೇಳಿದ್ದರು. ಅದು ಕಟ್ಟಿದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಕೋಟ್ಯಾಂತರ ರೂಪಾಯಿಗಳನ್ನು ಹರಿಜನರು ಮನೆ ಕಟ್ಟಿಕೊಳ್ಳುವುದಕ್ಕೆ ಕೊಟ್ಟಿದ್ದಾರೆ ಎಂದು ಹೇಳಿದರು. ಆದರೆ ಮಾಗಡಿ ತಾಲ್ಲೂಕಿನಲ್ಲಿ ಎರಡು ಮನೆಗಳನ್ನೂ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರ ಬೇಕಾದಷ್ಟು ರೊಕ್ಕ ಕೊಡುವುದಕ್ಕೆ ತಯಾರು ಇದೆ. ಸರ್ಕಾರ ಕೊಡುತ್ತಾರೆ ಆದರೆ ಅಂತಃಕಲಹ ಇರುವುದರಿಂದ ತಡವಾಗಿದೆ.

ಶ್ರೀ ಸಿ. ಆರ್. ರಂಗೇಗೌಡ.—ಹರಿಜನ ಗಿರಿಜನ ಇರುವ ಸೊಸೈಟಿಗಳಿಗೆ ಬರೇ ತಾಲ್ಲೂಕು ಬೋರ್ಡ್ ಅಧ್ಯಕ್ಷರನ್ನು ಅಧ್ಯಕ್ಷರನ್ನಾಗಿ ಮಾಡಿ ಹರಿಜನರ ಹಿತವನ್ನು ಅವರು ಅಲಕ್ಷಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಹರಿಜನರನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು ಮತ್ತು ಅವರು ತಮ್ಮ ಜೊತೆಯಲ್ಲಿ ಬರಬೇಕು ಎನ್ನುವ ಉದ್ದೇಶದಿಂದ ಅವರನ್ನು ಕಡೆಗಣಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಹಾಗೆ ಕಡೆಗಣಿಸಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಹರಿಜನ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಅಧ್ಯಕ್ಷರನ್ನು ಚುನಾಯಿಸಬೇಕು ಎಂದು ಸರ್ಕಾರ ಡೀ—ಅಫಿಶಿಯಲೈಸೇಷನ್ ಆಫ್ ಪವರ್ ವಿಚಾರವಾಗಿ ಸರ್ಕುಲರ್ ಎಲ್ಲರಿಗೂ ಕಳುಹಿಸಿದ್ದಾರೆ. ಆ ರೀತಿ ಮಾಡಿ ಸೊಸೈಟಿಯಲ್ಲಿ ಮಾಡದೇ ಇರುವುದಕ್ಕೆ ಕಾರಣ ಏನು ?

ಶ್ರೀ ಪಿ. ಎಂ. ನಾಡಗೌಡ.—ಸೊಸೈಟಿಯು ಬೈಲಾಕ್ಕೆ ಅಮೆಂಡ್‌ಮೆಂಟ್ ಮಾಡುವುದು ಇದೆ. ಆ ಕಾರಣಕ್ಕಾಗಿ ನಿಧಾನವಾಗಿದೆ. ಈ ತಿಂಗಳಿನಲ್ಲಿ ಮಾಡಿ ಕಳುಹಿಸುತ್ತೇವೆಂದು ಹೇಳಿದ್ದಾರೆ. ಅದು ಬಂದಮೇಲೆ ಆಗುತ್ತದೆ.

ಶ್ರೀ ಟಿ. ಚನ್ನಯ್ಯ.—ಒಂದು ಕೋಟಿ ಚಿಲ್ಲರೆ ರೂಪಾಯಿ ಹಣವನ್ನು ಹರಿಜನ ಕೋ-ಆಪರೇಟಿವ್ ಸೊಸೈಟಿಗಳಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಕೊಟ್ಟಿದ್ದೀರಿ ಎಂದು ಹೇಳಿದಿರಿ. ಆ ಹಣ ಹಂಚಿಕೆ ಮಾಡುವಾಗ ಸೊಸೈಟಿ ಸೆಕ್ರೆಟರಿಗಳಾದಂಥವರು ಮತ್ತು ಮೆಂಬರ್ಸ್ ಆಗಿದ್ದಂಥವರು ಬೇಕಾದಷ್ಟು ಹಣ

†Indicates that the speeches or remarks have not been revised by the member concerned.

(ಶ್ರೀ ಟಿ. ಚೆನ್ನಯ್ಯ)

ದುರುಪಯೋಗ ಮಾಡಿ ಮನೆಗಳಿಗೆ ನಾಲ ಎಷ್ಟು ಕೊಡಬೇಕು, ಎಷ್ಟು ಕೊಡುತ್ತಾ ಇಲ್ಲ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೇ ? ಹಾಗೆ ಬಂದ ಪಕ್ಷದಲ್ಲಿ ವಿಚಾರಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಅಂತಹ ದೂರು ಸರ್ಕಾರಕ್ಕೆ ಬಂದಿಲ್ಲ. ಅಂತಹ ಕೇಸಸ್ ತಾವು ಹೇಳಿದರೆ ಸರ್ಕಾರ ಶೀಘ್ರದಲ್ಲೇ ವಿಚಾರಣೆ ಮಾಡುತ್ತದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಮೂರೂ ಮುಕ್ಕಾಲು ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ತಯಾರಿದ್ದೀರಿ. ಅದರಲ್ಲಿ ಒಂದು ಕೋಟಿ ಚಿಲ್ಲರೆ ಖರ್ಚಾಗಿದೆ. ಬಾಕಿಯಿದು ಉಳಿದಿದೆ ಎಂದು ಹೇಳಿದಿರಿ. ಆ ರೀತಿ ಉಳಿದಿರುವುದಕ್ಕೆ, ಖರ್ಚಾಗದೆ ಇರುವುದಕ್ಕೆ ಸರ್ಕಾರಿ ಅಧಿಕಾರಿಗಳು ಮನಗೊಂದು ಡಿಸೈನ್ ಕೊಡಬೇಕು ಎಂದು ಹೇಳುವುದರಿಂದ ಅಡಚಣೆ ಆಗಿರುವುದು ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಆ ಕಾರಣ ಏನೂ ಇಲ್ಲ. ಕಾರಣ ಇದ್ದುದು, ಸೊಸೈಟಿಯಲ್ಲಿ ಷೇರ್ಸ್ ತೆಗೆದುಕೊಳ್ಳಬೇಕಾಗಿತ್ತದೆ. ಒಂದು ಗೊರಿನವರು ಸೊಸೈಟಿಯಲ್ಲಿ ಎಷ್ಟು ಷೇರುಗಳು ತೆಗೆದುಕೊಳ್ಳುತ್ತಾರೋ ಅದಕ್ಕೆ 8 ರಷ್ಟು ಪ್ರಮಾಣದಲ್ಲಿ ದುಡ್ಡು ಹಂಚಿಕೆ ಮಾಡುತ್ತೇವೆ. ಅದಕ್ಕೋಸ್ಕರ ತಡವಾಗಿದೆ.

Package Programme in Dharwar

*Q.—120. Sri H. C. LINGAREDDY (Malur).—

Will the Chief Minister be pleased to state :—

(*a*) whether there are proposals for introduction of package programme in wheat to Dharwar ;

(*b*) if so, the details thereof ?

A.—Sri D. P. PAWAR (Deputy Minister for Agriculture) [On behalf of SRI S. NIJALINGAPPA (Chief Minister)].—

(*a*) No.

(*b*) Does not arise.

Sri H. C. LINGA REDDY.—Whether Dharwar is the largest producer of wheat and if so, the quantity of wheat produced for the Kharif and Rabi seasons ?

Sri D. P. PAWAR.—We do not have those figures with us, Sir.

Mr. SPEAKER.—Will the hon. Deputy Minister kindly get them and furnish them to the member if they are available ?

Sri D. P. PAWAR.—Along with Dharwar there are a few other major wheat growing areas,-Belgaum, Dharwar, Bidar and we do not have exact figures with us.